**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 21.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ನನ್ನ ದಾವೆಗೆ ಸಂಬಂಧಿಸಿದಂತೆ ಮುಂದುವರೆದು ದಿಃ 09/02/2018 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.9 ಎಂದು, ದಿಃ 30/11/2011 ರ ಖರೀದಿ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಪಿ ಆರ್ ಎ ವಕೀಲರಿಂದಃ**

ದಾವಾ ಆಸ್ತಿಯ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಈ ದಾವಾದಲ್ಲಿ ನಾನು ಕ್ಲೇಮ್ ಮಾಡುತ್ತಿರುವ ವಿಷಯ 2008 ನೇ ಸಾಲಿನದ್ದು ಎಂದರೆ ಸರಿ. 2008 ರಿಂದ 2019 ರವರೆಗೆ ಪ್ರತಿವಾದಿಯ ಜೊತೆ ಸಂಪರ್ಕ ಮಾಡಿದ ಬಗ್ಗೆ 2019 ರ ನೋಟೀಸನ್ನು ಬಿಟ್ಟು ಬೇರೆ ಯಾವುದೇ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿ. 2008 ರಿಂದ 2019 ಅಂದರೆ ದಾವಾ ಸಲ್ಲಿಸುವ ಪೂರ್ವದಲ್ಲಿ ಕೊಡುವ ನೋಟೀಸ್ ಗಿಂತ ಮೊದಲು ನಮ್ಮ ಬಳಿ ಹಣ ಇದೆ ನೀವು ದಾಖಲೆ ಮಾಡಿಕೊಡಿ ಎಂದು ನಾವು ಪ್ರತಿವಾದಿಯನ್ನು ಕೇಳಿಲ್ಲ ಎಂದರೆ ಸಾಕ್ಷಿ ಕೇಳಿರುತ್ತೇವೆ ಎನ್ನುತ್ತಾರೆ. ಯಾವಾಗ ಯಾವಾಗ ಕೇಳಿರುತ್ತೀರೆಂದು ವಕೀಲರಿಗೆ ನೀವು ಮಾಹಿತಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇವೆ ಎನ್ನುತ್ತಾರೆ. ನಾವು ಮಾಹಿತಿ ಕೊಟ್ಟಿದ್ದು ನಂತರ ವಕೀಲರು ಏನು ಬರೆದಿದ್ದಾರೆಂದು ತಿಳಿದು ಸಹಿ ಮಾಡಿ ಆನಂತರ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇವೆ ಎಂದರೆ ಸರಿ. ನಮ್ಮ

ದಾವೆಯಲ್ಲಿ ಪ್ರತಿವಾದಿಯರಿಗೆ ನಾವು ಹಣವನ್ನು ಯಾವಾಗ ಕೇಳಿದೆವು ಎಂಬ ವಿಷಯವನ್ನು ಎಲ್ಲಿಯೂ ಬರೆದಿಲ್ಲ ಎಂದರೆ ಸಾಕ್ಷಿ ಬರೆಸಿದ್ದೇನೆ ಎನ್ನುತ್ತಾರೆ. ನನ್ನ ದಾವೆಯಲ್ಲಿ ಎಲ್ಲಿಯೂ ಕೂಡ ಪ್ರತಿವಾದಿಯರನ್ನು ಹಣ ಕೇಳಿದ ಬಗ್ಗೆ ನಾವು ಬರೆಸಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2008 ವರೆಗು ಕೊಡುವುದು ತೆಗೆದುಕೊಳ್ಳುವ ವ್ಯವಹಾರ ಎಲ್ಲ ಮುಗಿದು ಹೋಗಿದ್ದರಿಂದ ನಾನು ಆನಂತರ ಅವರನ್ನು ಕೇಳಿಯೇ ಇಲ್ಲ ಎಂದರೆ ಸಾಕ್ಷಿ ಮುಗಿದು ಹೋಗಿರಲಿಲ್ಲ ಎನ್ನುತ್ತಾರೆ. ಬಹಳ ವರ್ಷಗಳಾದ ಕಾರಣ ನಾನು ಪ್ರತಿವಾದಿಗಳಿಂದ ಹಣ ಕೇಳುವ ಹಕ್ಕನ್ನು ಕಳೆದುಕೊಂಡಿರುತ್ತೇನೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ನಾನು ಗೃಹಿಣಿಯಾಗಿರುತ್ತೇನೆ. ಮೊದಲಿನಿಂದಲೂ ನಾನು ಯಾವುದೇ ಉದ್ಯೋಗ ಮಾಡುತ್ತಿಲ್ಲ. ನಮ್ಮ ಆದಾಯದ ಮೂಲ ನನ್ನ ಮಕ್ಕಳು. ನನ್ನ ಬ್ಯಾಂಕಿನ ಖಾತೆ ಎಸ್ ಬಿ ಐ ಖಾತೆ ಇದೆ. ಅದು ಯಾವ ಶಾಖೆ ಎಂಬುದು ನನಗೆ ಗೊತ್ತಿಲ್ಲ. ನಾನು 2008 ನೇ ಇಸ್ವಿಯಲ್ಲಿ ಸಾಕಷ್ಟು ವ್ಯವಹಾರ ಮಾಡಿದ್ದೇನೆ ಎಂದು ಹೇಳಿದ್ದು ಆದಾಯ ತೆರಿಗೆ ರಿಟರ್ನ್ಸ್ ತುಂಬಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. 2008 ನೇ ಸಾಲಿನಲ್ಲಿ ನನ್ನ ಬಳಿ 5 ಲಕ್ಷ ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರಪಡಿಸಿದ್ದೇನೆ.

ನನಗೆ ಪ್ರತಿವಾದಿಯರು ಸಂಬಂಧಿಕರಾಗಬೇಕು. ಸದರಿ ಆಸ್ತಿ ಅಮರಗೋಳ ಪೇಟ್ರೋಲ್ ಪಂಪ್ ಹತ್ತಿರ ಇರುತ್ತದೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯರಿಗೆ ವಿಜಯಾ ಬ್ಯಾಂಕಿನಲ್ಲಿ ಸಾಲ ಇತ್ತು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಸಾಲಕ್ಕೆ ಸಂಬಂಧಿಸಿದಂತೆ ಬ್ಯಾಂಕಿನವರು ಹಣ ಮರುಪಾವತಿಗಾಗಿ ಪ್ರತಿವಾದಿಗಳ ಮೇಲೆ ಕೇಸ್ ದಾಖಲಿಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಪ್ರತಿವಾದಿಯರು ಆ ಸಾಲವನ್ನು ತುಂಬಬೇಕೆಂಬ ಉದ್ದೇಶ ಹೊಂದಿದ್ದರು ಎಂದರೆ ಸರಿ. ಪ್ರತಿವಾದಿಯರು ಪರಿಚಯವಿದ್ದ

ಕಾರಣ ನಮ್ಮ ಬಳಿ ಅವರು 2 ಲಕ್ಷ ರೂ. ಹಣ ಸಾಲ ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ ಚೆಕ್ ನ ಮುಖಾಂತರ 2 ಲಕ್ಷ ರೂ. ಕೊಟ್ಟೆವು ಎನ್ನುತ್ತಾರೆ. ಸಾಕ್ಷಿ ಮುಂದುವರೆದು 3 ಲಕ್ಷ ಚೆಕ್ ನ ಮೂಲಕ ಮತ್ತು 2 ಲಕ್ಷ ರೂ. ನಗದಾಗಿ ಹಣವನ್ನು ಕೊಟ್ಟಿರುತ್ತೇವೆ ಎನ್ನುತ್ತಾರೆ. 3 ಲಕ್ಷ ರೂ. ಹಣವನ್ನು ಚೆಕ್ ಮೂಲಕ ಕೊಟ್ಟಿರುತ್ತೇವೆಂದು ವಕೀಲರಿಗೆ ಮಾಹಿತಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ನನ್ನ ದಾವೆಯಲ್ಲಿ 2 ಲಕ್ಷ ರೂ.ಗಳಿಗೆ ಚೆಕ್ ಕೊಟ್ಟಿರುತ್ತೇನೆಂದು ಬರೆದಿದ್ದು ಅದು ಸರಿ ಇದೆಯಾ ಅಥವಾ ನಾನು ಈಗ ಹೇಳುತ್ತಿರುವುದು ಸರಿ ಇದೆಯಾ ಎಂದರೆ ಸಾಕ್ಷಿ ನಾನು ಈಗ ಹೇಳುವುದೇ ಸರಿ ಎನ್ನುತ್ತಾರೆ. 3 ಲಕ್ಷ ರೂ.ಗಳನ್ನು ಚೆಕ್ ಮೂಲಕ ಕೊಟ್ಟೆ ಎಂದು ತೋರಿಸಲು ನ್ಯಾಯಾಲಯಕ್ಕೆ ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಸಾಕ್ಷಿಗೆ ತಾವು ಗುರುತಿಸಿಕೊಂಡಿರುವ ನಿಶಾನೆಗಳನ್ನು ತೋರಿಸಿ ಅವುಗಳಲ್ಲಿ 3 ಲಕ್ಷ ರೂ. ಚೆಕ್ ಮೂಲಕ ಕೊಟ್ಟಿರುವ ಬಗ್ಗೆ ದಾಖಲೆ ಯಾವುದು ಎಂದರೆ ಸಾಕ್ಷಿ ನನಗೆ ಇಂಗ್ಲೀಷ ತಿಳಿಯುವುದಿಲ್ಲ ಏನು ಹೇಳಬೇಕು ಎನ್ನುತ್ತಾರೆ. ಪ್ರತಿವಾದಿಯರು ಆಗಲೇ ವಿಜಯಾ ಬ್ಯಾಂಕ್ ಲೋಲ್ ನ್ನು ತುಂಬಿದ್ದರು ಎಂದರೆ ಸಾಕ್ಷಿ ನಾನು ಮತ್ತು ನನ್ನ ಮಕ್ಕಳು ನಿಂತು ಆ ಸಾಲವನ್ನು ಮುಕ್ತಾಯ ಮಾಡಿಸಿರುತ್ತೇವೆ ಎನ್ನುತ್ತಾರೆ.

ದಿಃ17/10/2008 ರ ಕ್ರಯದ ಕರಾರನ್ನು ನಾನು ದಾವಾದಲ್ಲಿ ಹೇಳಿದ್ದು ಅದನ್ನು ನ್ಯಾಯಾಲಯದಲ್ಲಿ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಮಾಡಿದ್ದಾರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದೀ 17/10/2008 ರ ಕ್ರಯದ ಕರಾರು ಎಂದು ಹೇಳಿದ್ದು ಆ ರೀತಿಯ ಕರಾರು ಯಾವತ್ತಿಗೂ ಆಗಿಲ್ಲ ಎಂದರೆ ಸಾಕ್ಷಿ ಆಗಿದೆ ಎನ್ನುತ್ತಾರೆ. ಅದೇ ರೀತಿ 3

ಲಕ್ಷ ರೂ. ನಗದು ಕೊಟಿಟದ್ದೇನೆಂದು ದಾವಾದಲ್ಲಿ ಬರೆಸಿದ್ದು ಅದನ್ನು ಕೂಡ ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**